REVIEWS OF LITERATURE

ISSN: 2347-2723
IMPACT FACTOR : 3.3754(UIF)
VOLUME - 5 | ISSUE - 3 | OCTOBER - 2017



# ಪಿ. ಲಂಕೇಶ್‌ರವರ ‘ಗುಣಮುಖ’: ವಸ್ತು ವಿಶ್ಲೇಷಣೆ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**

ಸೃಜನಶೀಲ ಬರಹಗಾರರಾದ ಲಂಕೇಶರು ಇತಿಹಾಸದ ನೈಜ ಕಥೆಯೊಂದನ್ನು ಆಯ್ಕೆಮಾಡಿಕೊಂಡು ಅದಕ್ಕೊಂದು ಮೂರ್ತ ಸ್ವರೂಪ ಕೊಡುತ್ತಾರೆ. ಇಂದಿನ ಕಾಲಸಂದರ್ಭಕ್ಕೆ ತಕ್ಕಂತೆ ನಾಟಕ ಹೆಣೆಯುತ್ತಾರೆ. ಮೂಲವಸ್ತುವಿಗೆ ಧಕ್ಕೆ ಬಾರದಂತೆ ಸೃಷ್ಟಿಸುವ ಕಲೆ ಸಿದ್ಧಹಸ್ತವಾಗಿದೆ. ಸುಮಾರು ಹತ್ತು ಪ್ರಬುದ್ಧ ನಾಟಕಗಳನ್ನು ಬರೆದ ಲಂಕೇಶರು, ಇದು ಅವರು ಬರೆದ ಕೊನೆಯ ನಾಟಕ ಗುಣಮುಖದಲ್ಲಿ ಬರುವ ನಾದಿರ್‌ಷಾನ ಪಾತ್ರಕ್ಕೂ ತಮಗೂ ಯಾವುದೊ ಒಂದು ರೀತಿ ಅವಿನೋಭಾವ ಸಂಬಂಧವೆಂಬಂತೆ ಚಿತ್ರಿಸಿರುವರು. 1993ರಲ್ಲಿ ರಚನೆಯಾಗುವ ಸಂದರ್ಭದಲ್ಲಿ ಲಂಕೇಶರು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದರು ಒಂದು ಕಣ್ಣು ಕಳೆದುಕೊಂಡಿದ್ದರು. ಗುಣಮುಖ ನಾಟಕ ಇತಿಹಾಸದ ವಸ್ತುವಾದರು, ಮಾನವ ಸಂಸ್ಕೃತಿಯನ್ನು ಕಟ್ಟಿಕೊಡುವ ಕೆಲಸ ಮಾಡುತ್ತದೆ.

## ಪ್ರಸ್ತಾವನೆ

ಕ್ರಿ.ಶ. 1740ರಲ್ಲಿ ವಿದೇಶಿ ದಾಳಿಕೋರನಾದ ನಾದಿರ್‌ಷಾ ದೆಹಲಿಯ ಮೇಲೆ ಆಕ್ರಮಣ ಮಾಡಿ ಸಂಪೂರ್ಣ ದಿಲ್ಲಿಯನ್ನು ವಶಪಡಿಸಿಕೊಳ್ಳುತ್ತಾನೆ. ಅಸಮರ್ಥ ಮೊಘಲ್ ದೊರೆಯಾದ ನಜಿರುದ್ದೀನ್ ಮಹಮದ್‌ಷಾ ಶರಣಾಗತನಾಗುತ್ತಾನೆ. ಈ ಸಂದರ್ಭದಲ್ಲಿ ನಾದಿರ್‌ಷಾನ ಆರೋಗ್ಯ ಸಂಪೂರ್ಣವಾಗಿ ಹದಗೆಟ್ಟಿರುತ್ತದೆ. ಈ ಸಂದರ್ಭದಲ್ಲಿ ಭಾರತ ದೇಶದಲ್ಲಿ ನಡೆಯುವ ಒಳಜಗಳಗಳು, ಇಲ್ಲಿನ ಪಿತೂರಿಗಳು, ಹಗೆತನಗಳಿಂದ ಇನ್ನಷ್ಟು ರೋಸಿ ಹೋಗುತ್ತಾನೆ. ಯಾರ ಮೇಲೆಯೂ ಸಂಶಯ ಬಂದರೆ ತಕ್ಷಣ ಅವರ ತಲೆ ತೆಗೆಯುತ್ತಾನೆ. ಅಷ್ಟು ಕಠೋರ ಮತ್ತು ಕ್ರೂರತನ ಮೈಗೂಡಿಸಿಕೊಂಡಿರುತ್ತಾನೆ.

ನಜಿರುದ್ದೀನ್‌ಷಾ ಎಷ್ಟೇ ಕವನ ವಾಚನ ಮಾಡಿ ಹೊಗಳಿದರು ರಾಜನಾದವನು ಇಂಥ ವ್ಯರ್ಥ ಸಮಯ ಹಾಳು ಮಾಡಬಾರದು ಎಂದು ಎಚ್ಚರಿಸುತ್ತಾನೆ. ಪಿತೂರಿಮಾಡುವ, ಒಳಸಂಚುಕೋರರಾದ ಸಾದತ್‌ಖಾನ್ ಮತ್ತು ಮುಲ್ಕ್‌ರ ತಲೆ ಕತ್ತರಿಸುತ್ತಾನೆ. ತಾನು ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಅಲಾವಿಖಾನ್‌ನಿಂದ ಗುಣಮುಖನಾಗಿ ತನ್ನ ಕ್ರೂರತನ ಕಡಿಮೆ ಮಾಡಿಕೊಳ್ಳುತ್ತಾನೆ. ಈ ಹಕೀಮನಿಂದ ಜೀವನದ ನಿಜ ಸ್ವರೂಪವನ್ನು ಅರಿಯಲು ಪ್ರಯತ್ನಿಸುತ್ತಾನೆ.

## ಇತಿಹಾಸ ಮತ್ತು ನಾಟಕದ ವಸ್ತುವಿಗೂ ಸಾಮ್ಯ

ನಾದಿರ್‌ಷಾನು 1736ರಲ್ಲಿ ಪರ್ಷಿಯಾ (ಇರಾನ್)ದ ಸಿಂಹಾಸನವನ್ನು ಅಫಘನ್‌ರಿಂದ ವಶಪಡಿಸಿಕೊಂಡನು. ತಾನೇ ಚಕ್ರವರ್ತಿಯೆಂದು ಘೋಷಿಸಿಕೊಂಡನು 1738ರಲ್ಲಿ ಕಾಂದಹಾರವನ್ನು ವಶಪಡಿಸಿಕೊಂಡು ಅಲ್ಲಿನ ಅಫಘನ್‌ರ ಪ್ರಭುತ್ವವನ್ನೇ ಇಲ್ಲವಾಗಿಸಿದನು. ನಂತರ ನಾದಿರ್‌ಷಾನು ಅಫ್‌ಘಾನಿಸ್ತಾನ ಮತ್ತು ಭಾರತಗಳ ಮೇಲೆ ದಾಳಿ ಕೈಗೊಳ್ಳಲು ಯೋಜನೆ ಸಿದ್ಧಗೊಳಿಸಿದನು. ಮೊಘಲ್ ದೊರೆಗಳು ಅಸಮರ್ಥರೆಂಬುದನ್ನು ವಾಯುವ್ಯ ಗಡಿಗಳನ್ನು ರಕ್ಷಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡು ದಾಳಿ ಆರಂಭಿಸಿದನು. 1739ರಲ್ಲಿ ಘಸ್ನಿ, ಕಾಬೂಲ್, ಪಂಜಾಬ್‌ಗಳನ್ನು ವಶಪಡಿಸಿಕೊಂಡನು. ಪಂಜಾಬದ ಸುಬೆದಾರ್ ಜಖಾರಿಯಖಾನನನ್ನು ಸೊಲಿಸಿದನು. ದಿಲ್ಲಿಯ ಕೆಲವೇ ಮೈಲುಗಳ ದೂರಕ್ಕೆ ಬಂದಾಗ ಎಚ್ಚೆತ್ತ ಮೊಘಲ್ ದೊರೆ, ಸೈನ್ಯವನ್ನು ಕಳುಹಿಸಿದನು. ಸಮಸ್ತ ಸೈನ್ಯವನ್ನು ಧೂಳಿಪಟ ಮಾಡಿ ದೆಹಲಿಯನ್ನು ಪ್ರವೇಶಿಸಿದನು. 1739 ಫೆಬ್ರುವರಿ 24ರಂದು ಯುದ್ಧ ಪ್ರಾರಂಭವಾಗಿ 3 ಗಂಟೆಗಳ ಕಾಲ ನಡೆಯಿತು, ಇದರಲ್ಲಿ ಸಾದತ್‌ಖಾನ್ ಸೆರೆಸಿಕ್ಕನು. ಮುಲ್ಕ್‌ನ ಸೈನ್ಯಭಾಗವಹಿಸಲಿಲ್ಲ, ಆತ ಓಡಿಹೋದನು. ಎರಡು ಕಡೆ ಒಪ್ಪಂದವಾಯಿತು. ಎರಡು ಕೋಟಿ ರೂಪಾಯಿ ನಾದಿರ್‌ಷಾನಿಗೆ ಕೊಡಬೇಕು ಎನ್ನುವ ಕರಾರಿನ ಮೇಲೆ ಸಾದತ್‌ಖಾನ್‌ನನ್ನು ಬಿಡುಗಡೆ ಮಾಡಲು ಒಪ್ಪಿದನು. ಈ ಸಮಯದಲ್ಲಿ ಇನ್ನೊಂದು ಬೆಳವಣಿಗೆ ಕೊಲಾಹಲಕ್ಕೆ ಕಾರಣವಾಯಿತು **“ಆಗ ಚಕ್ರವರ್ತಿಯು ಮೀರ್‌ಭಕ್ಷಿ ಹುದ್ದೆಗೆ ನಿಜಾಮ್-ಉಲ್-ಮುಲ್ಕ್‌ನನ್ನು ನೇಮಕ ಮಾಡಿದ್ದರಿಂದ ನಾದಿರ್‌ಷಾನ ಶಿಬಿರದಲ್ಲಿ ಬಂಧಿತನಾಗಿದ್ದ ಸಾದತ್‌ಖಾನ್‌ನು ಕೋಪಗೊಂಡು ಮೀರ್‌ಭಕ್ಷಿ ಹುದ್ದೆಯು ತನಗೆ ಸಿಗದ್ದರಿಂದ ಹತಾಶನಾಗಿ ನಾದಿರ್‌ಷಾನು ದೆಹಲಿಗೆ ಹೋಗುವುದಾದರೆ 20 ಕೋಟಿಗೂ ಹೆಚ್ಚು ಮೌಲ್ಯದ ಸಂಪತ್ತು ದೊರೆಯುವುದೆಂದು ಸಲಹೆ ನೀಡಿದನು. ಇದರಿಂದ ಉತ್ತೇಜಿತನಾದ ನಾದಿರ್‌ಷಾನು ಒಪ್ಪಂದದ**

**ಷರತ್ತನ್ನು ತಿರಸ್ಕರಿಸಿ ನಿಜಾಮ್-ಉಲ್-ಮುಲ್ಕ್ ಮತ್ತು ಮಹಮದ್‌ಷಾರು ನಾದಿರ್‌ಷಾನ ಭೇಟಿಗೆ ಬಂದಾಗ ಅವರಿಬ್ಬರನ್ನು ಬಂಧಿಸಿದನು. ಬಂಧಿಗಳ ಸಮೇತ ದೆಹಲಿಯತ್ತ ಮುನ್ನಡೆದನು"**[1] ದೆಹಲಿಯನ್ನು 1739 ಮಾರ್ಚ್ 22ರಂದು ಸಂಪೂರ್ಣ ನಾಶಮಾಡಿ ಸಿಂಹಾಸನವನ್ನು ವಶಪಡಿಸಿಕೊಂಡನು **"ಪ್ರಸಿದ್ಧ ಕೋಹಿನುರ್ ವಜ್ರ ಸೇರಿದಂತೆ ಚಕ್ರವರ್ತಿಯ ಕಿರೀಟದ ಎಲ್ಲ ವಜ್ರಗಳನ್ನು ಷಹಜಹಾನನ ಅಮೂಲ್ಯ ಮಯೂರ ಸಿಂಹಾಸನ ಮತ್ತು ಭಾರತೀಯ ಸಂಗೀತದ ಸಚಿತ್ರ ಪರ್ಷಿಯನ್ ಹಸ್ತಪ್ರತಿಯನ್ನು ಒಳಗೊಂಡಂತೆ ರಾಜ ಭಂಡಾರದಿಂದ ಹೆಚ್ಚು ಪ್ರಮಾಣದ ಆಭರಣಗಳು, ಅಲಂಕಾರ ಸಜ್ಜುಗಳು, ಪೀಠೋಪಕರಣಗಳು, ವಜ್ರ ವೈಢೂರ್ಯ, ರತ್ನದಿಂದ ಕೂಡಿದ ಒಡವೆಗಳು ಮತ್ತು ಇತರ ಅಮೂಲ್ಯ ವಸ್ತುಗಳನ್ನು ತನ್ನೊಡನೆ ಕೊಂಡೊಯ್ದು ನಾದಿರ್‌ಷಾನ ಆಪ್ತ ಕಾರ್ಯದರ್ಶಿಯ ಅಂದಾಜಿನಂತೆಯೇ ನಾದಿರ್‌ಷಾನು ದೆಹಲಿಯಿಂದ ಸೂರೆಗೈದ ಸಂಪತ್ತಿನ ಪ್ರಮಾಣ 15 ಕೋಟಿಗೂ ಹೆಚ್ಚಾಗಿತ್ತು. ನಾದಿರ್‌ಷಾನು ಇಷ್ಟಲ್ಲದೇ ತನ್ನೊಡನೆ 300 ಆನೆಗಳು 10,000 ಕುದುರೆಗಳು ಮತ್ತು ಅಷ್ಟೆ ಸಂಖ್ಯೆಯ ಒಂಟೆಗಳನ್ನು ತೆಗೆದುಕೊಂಡು ಹೋದನು. ನಾದಿರ್‌ಷಾನು ಹಿಂತಿರುಗುವಾಗ ಮಹಮದ್‌ಷಾನನ್ನು ಹಿಂದೂಸ್ತಾನದ ಚಕ್ರವರ್ತಿಯೆಂದು ಮನ್ನಿಸಿ ಅದಕ್ಕೆ ಪ್ರತಿಫಲವಾಗಿ ಅಫ್‌ಘಾನಿಸ್ತಾನ, ಕಾಶ್ಮೀರ, ಪಶ್ಚಿಮ ಪಂಜಾಬ್ ಮತ್ತು ಸಿಂಧ್‌ಗಳನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು"**[2] ನಾದಿರ್‌ಷಾ ದೆಹಲಿಯಲ್ಲಿ ಇದ್ದಿರುವುದು ಕೇವಲ ಎರಡು ತಿಂಗಳು ಮಾತ್ರ ಈ ಎರಡು ತಿಂಗಳಲ್ಲಿ ಆತನಿಗೆ ಆರೋಗ್ಯ ಹದಗೆಟ್ಟಿತು. ಈ ಗುಣಮುಖ ನಾಟಕ ಈ ಎರಡು ತಿಂಗಳ ಅವಧಿಯಲ್ಲಿ ನಡೆದ ಕಥನ ಕ್ರಿಯೆಯಾಗಿದೆ.

## ವಸ್ತು ವಿಶ್ಲೇಷಣೆ

ಇತಿಹಾಸದ ಘಟನೆಗೂ ಮತ್ತು ಗುಣಮುಖ ನಾಟಕ ಸಾಮ್ಯತೆಯಿಂದ ಕೂಡಿದೆ. ಅಲ್ಲಿ ನಡೆಯುವ ನಿಜ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸದೆ, ಓದುಗರನ್ನು ಬೆರುಗುಗೊಳಿಸುವಂತೆ ಅಂದಿನ ಪರಿಸ್ಥಿತಿಯನ್ನು ವರ್ಣಿಸಲಾಗಿದೆ. ಈ ನಾಟಕದಲ್ಲಿ ಈಗಾಗಲೇ ದೆಹಲಿಯನ್ನು ವಶಪಡಿಸಿಕೊಂಡಿದ್ದಾನೆ. ಆದರೆ ನಾದಿರ್‌ಷಾ ಇಲ್ಲಿನ ಘಟನೆಗಳಿಂದ ರೋಸಿಹೋಗಿದ್ದಾನೆ. ಪಿತೂರಿಗಳು, ಒಳ ಜಗಳಗಳು, ಮೋಸ, ಕಪಟ, ವಂಚನೆಗಳಿಂದ ನೊಂದು ಹೋಗಿದ್ದಾನೆ. ದೆಹಲಿಯ ಸಿಂಹಾಸನದ ಮೇಲೆ ಕುಳಿತು ನ್ಯಾಯನಿರ್ಣಯ ಮಾಡಲು ಸಿದ್ಧನಿಲ್ಲ. ಆತನಿಗೆ ಕೇವಲ ಹಣದ, ಅಧಿಕಾರದ ಹುಚ್ಚು ಹಿಡಿದಿದೆ. ನ್ಯಾಯ ಕೇಳಲು ಬಂದ ಇಕ್ಬಾಲ್ ಮತ್ತು ಸಬೀನಾರನ್ನು ಆಸ್ಥಾನದಿಂದ ಹೊರಗೆ ಹಾಕಲು ಆಜ್ಞೆ ಮಾಡುತ್ತಾನೆ. ರಜ್ವಿ, ಫಾರೂಕ್ ಇವರೆಲ್ಲರನ್ನು ಕುರಿತು ಮಾತನಾಡುತ್ತಾನೆ **"ನಾದಿರ್: ಇದು ಬಗೆಹರಿಯದ ಪ್ರಶ್ನೆ, ಕೇಳ ಮೂರ್ಖರೆ, ಕೇಳಿ, ಹಿಂದೂಸ್ತಾನಕ್ಕೆ ಬಂದ ಮೇಲೆ ಚಿಕ್ಕ ಪ್ರಶ್ನೆಗಳು ಇಲ್ಲಿಯ ಪರ್ವತದಂತೆ, ನದಿಗಳಂತೆ ಕಡೆಗೆ ಮಂಜಿನಂತೆ ಆಗಿ ಪ್ರಶ್ನೆಯೇ ಇಲ್ಲ ಅನ್ನಿಸಿಬಿಡ್ತವೆ, ಸುಳ್ಳು ನಿಜದಂತೆ ನಿಜ ಸುಳ್ಳನಂತೆ ಆಗ್ತದೆ"**[3] ಎಂದು ಹೇಳುತ್ತಾನೆ.

ನಾದಿರ್‌ಷಾನಿಗೆ ಅನ್ಯಾಯ ಪಿತೂರಿಗಳನ್ನು ತಡೆಯಬಲ್ಲ ಎದೆಗಾರಿಕೆ ಇರುತ್ತದೆ. ಸಾದತ್ ಖಾನ್‌ನನ್ನು ವಿನಮ್ರದಿಂದ ಪರೀಕ್ಷಿಸಿ ಆತನನ್ನು ನೆಲಕ್ಕೆ ಹಾಕಿ ಗುದ್ದುತ್ತಾನೆ. ಸಾದತ್‌ಖಾನ್‌ನ ಮಕ್ಕಳನ್ನು ಕುರಿತು

**"ಈ ಸಾದತ್‌ಖಾನ್‌ನ ಮಕ್ಕಳು ಯಾರು? ಹತ್ತಿರ ಬನ್ನಿ (ಅವರು ಹೆದರಿ ಕಂಗಾಲಾಗಿರುವರು)**

**(ನಕ್ಕು) ಮೂರ್ಖರಿರಾ, ನೀವು ಮಕ್ಕಳಲ್ಲ, ಎಲ್ಲರ ತಲೆನೋವುಗಳು, ನೀವು ಇವರಂತೆ ದಿವಾನರಾಗಬಹುದು, ಸಾಮಾನ್ಯ ಕಾರ್ಯಕರ್ತರು ಜವಾಬ್ದಾರಿ ಹೊರುವವರು ಹೊಣೆಯಿಂದ ತಪ್ಪಿಸಿಕೊಳ್ಳಲಾಗದ ವಿನಮ್ರ ಸೇವಕರು ಈಗ ಈತನನ್ನು ಎಳೆದುಕೊಂಡು ಹೋಗಿ ಮೊಗಲ್ ದೊರೆಗೆ ಇವನನ್ನು ತೋರಿಸಿ**

**(ಅವರು ಅವನನ್ನು ಎತ್ತಿಕೊಂಡು ಹೋಗುವರು, ನಾದಿರ್‌ನ ಸ್ವಾಸ್ಥ ಇನ್ನೂ ಕೆಟ್ಟಿದೆ, ಕೆಮ್ಮುವನು, ತನ್ನ ರೋಷದಿಂದಲೇ ಆಘಾತಕ್ಕೀಡಾದಂತೆ ನೋವನ್ನನುಭವಿಸುವನು)"**[4] ನಾದಿರ್‌ಷಾ ಅನ್ಯಾಯವನ್ನು ಸಹಿಸಲಾರ ಸಾದತ್‌ಖಾನರಂತೆ ಇವರ ಮಕ್ಕಳು ಮೋಸಗಾರರಾಗಿರುತ್ತಾರೆ ಎನ್ನುವುದು ಈತನ ಊಹೆ.

ನಜಿರುದ್ದೀನ್‌ಷಾ ತಮ್ಮನ್ನು ಕುರಿತು ಕವನ ಒಂದು ರಚಿಸಿದ್ದೇನೆ ಎಂದು ಹೇಳಿದರೆ, ಆಯ್ತು ಹೇಳಿಬಿಡಿ ಕೇಳೋಣ ನಜಿರುದ್ದೀನ್:

**"ಹಿಮಾಲಯ ಪರ್ವತದ ತಪ್ಪಲಲ್ಲಿ**
**ಸಿಂಹವೊಂದು ಮೊಗದೊರಿತು**
**ಗುಬ್ಬಚ್ಚಿಗಳು ದಿಕ್ಕು ತೋಚದೆ**
**ಗೂಡಿನಲ್ಲಿ ಮುದುಡಿಕೂತವು**
**ಇನ್ನೂ ಹೇಳಲೇ**

**ಅಲ್ಲಯ್ಯ ನೀನೊಬ್ಬ ದೊರೆ, ಮೊಘಲ್ ಸಾಮ್ರಾಟ"**[5] ಎಂದು ದೊರೆಯಾದವನ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಾನೆ. ನಜಿರುದ್ದೀನ್‌ನ ಹೇಡಿತನ, ಅಸಮರ್ಥತೆಯನ್ನು ಅರಿತ ನಾದಿರ್‌ಷಾ "ನಾವು ನಿನ್ನಂಥ ಒಬ್ಬ ಮೂರ್ಖನಿಗೆ ಈ ದೇಶವನ್ನು ಒಪ್ಪಿಸಿ ಹೊರಟು ಹೋಗುವುದಾಗಿ ತಿಳಿದಿದ್ದಿ" ಎಂದು ಹೇಳುತ್ತಾನೆ. ಇಷ್ಟೆಲ್ಲಾ ಆಕ್ರಮಣ, ತೊಂದರೆ ಕೊಟ್ಟ ನಾದಿರ್‌ಷಾನ ಬಗ್ಗೆ ನಜಿರುದ್ದೀನ್‌ಷಾ ಹೇಳುವುದು ಒಂದು ವಿಪರ್ಯಾಸವೇ ಸರಿ

**"ನಾದಿರ್: ನಮ್ಮನ್ನು ನೋಡು, ಏನನ್ನಿಸುತ್ತೆ ಹೇಳು**
**ನಜಿರುದ್ದೀನ್: ಮಹಾಪರಾಕ್ರಮಿಗಳು, ನೋಡಲು ಒರಟರಾಗಿದ್ದರೂ ಮೃದು ಹೃದಯದ ಉದಾರಿಗಳು, ಲಕ್ಷಗಟ್ಟಲೆ ಯೋಧರನ್ನು, ಮಂಜನ್ನು ಸೂರ್ಯಕಿರಣ ಕರಗಿಸುವಂತೆ ಕರಗಿಸಿಬಿಡಬಲ್ಲ ಧೀರರು, ಭಯ, ಆತಂಕ, ಗೊಂದಲ ಒಂದೂ ಇಲ್ಲದ ಮಹಾನ್‌ವ್ಯಕ್ತಿ. ತಮ್ಮ ಬಗ್ಗೆ ನಾನು ಬಹಳ ಯೋಚಿಸಿದ್ದೇನೆ. ನಿಮ್ಮ ಕಣ್ಣುಗಳ ಕಾಂತಿ, ನಿಮ್ಮ ಗುಂಡಿಗೆಯ ಶಕ್ತಿ ನಿಮ್ಮ ಆತ್ಮದ ಕಾಂತಿ ಎಲ್ಲವನ್ನು ಕುರಿತು ತಾಸುಗಟ್ಟಲೆ ಯೋಚಿಸಿದ್ದೇನೆ ನಿಮ್ಮ ನೆಮ್ಮದಿಗಾಗಿ ನಾನು ಅಲ್ಲಾನಲ್ಲಿ ಪ್ರಾರ್ಥಿಸಿದ್ದೇನೆ.**
**ನಾದಿರ್: ಒಂದು ಸಣ್ಣ ಸತ್ಯ"**[6] ನಿನ್ನ ಸುಳ್ಳುಗಳನ್ನು ಕೇಳಿ ನನಗೆ ತಲೆ ಸಿಡಿದು ಹೋಗುತ್ತಿದೆ ಎಂದು ಹತ್ತಿರ ಕರೆದು ಹೊಡೆಯುವವನು. ಇದನ್ನು ನಿನ್ನ ದಿವಾನ್ ಮುಲ್ಕ್‌ನಿಗೆ ತಿಳಿಸು ಎಂದು ಹೇಳಿ ಕಳುಹಿಸುವವನು.

ಈ ಎಲ್ಲಾ ಘಟನೆಗಳಿಂದ ಮುಲ್ಕ್ ತತ್ತರಿಸಿ ಹೋಗಿದ್ದಾನೆ. ಸಾದತ್‌ಖಾನ್‌ನಿಗೆ ಆದ ಶಾಸ್ತಿ ತನಗೆ ಆಗುತ್ತದೆ ಎಂದು ತಿಳಿದು ಗಾಬರಿಯಾಗುತ್ತಾನೆ. ಇಂದಿಲ್ಲ ನಾಳೆ ನನ್ನ ಸಾವು ಖಚಿತ ಎಂದು ತಿಳಿದುಕೊಳ್ಳುತ್ತಾನೆ.

ಮುಲ್ಕ್ ಮತ್ತು ಸಾದತ್‌ಖಾನ್ ಇಬ್ಬರೂ ಕಳ್ಳ ಪತ್ರ ಬರೆದಿರುತ್ತಾರೆ. ಆದರೆ ಈ ಇರ್ವರನ್ನು ನಾದಿರ್‌ಷಾ ನಂಬಲಾರ. ನಜಿರುದ್ದೀನ್ ಜೊತೆಗೂಡಿ ಮತ್ತೊಂದು ಪಿತೂರಿಗೆ ಮುಲ್ಕ್ ಕೈಹಾಕುತ್ತಾನೆ. ಆದರೆ ನಜಿರುದ್ದೀನ್ ಇದಕ್ಕೆ ಒಪ್ಪಲಾರ.

ನಾದಿರ್‌ಷಾ ಎದುರು ಬಂದಾಗ, ನಜಿರುದ್ದೀನ್‌ಷಾರು ಕೊಹಿನೂರ್ ವಜ್ರ ಮತ್ತು ಸಿಂಹಾಸನ ಮುಚ್ಚಿ ಇಟ್ಟ ವಿಷಯ ಬಹಿರಂಗ ಪಡಿಸುತ್ತಾನೆ. **"ದಿವಾನ್ ರಜ್ವಿಯವರೆ, ತಾವಾದರೂ ಸುಲ್ತಾನರಿಗೆ, ದೇವರ ಸಮಾನರಾದ ನಾದಿರ್ ದೊರೆಗಳಿಗೆ ಹೇಳಬೇಕು, ನಾನು ಮಕ್ಕಳೊಂದಿಗೆ ಕುತಂತ್ರ ಅರಿಯದವನು, ಜೀವನ ಪರ್ಯಂತ ತಮ್ಮೆಲ್ಲರ ಸೇವೆ ಮಾಡಬಲ್ಲೆ**
**ರಜ್ವಿ; (ನಾದಿರ್‌ನಷ್ಟೆ ಗಂಭೀರವಾಗಿ) ಕೃಷ್ಣ ಪಕ್ಷ ಶುಕ್ಲ ಪಕ್ಷದ ಸ್ಥಾನ ಪಡೆಯಲಚ್ಛಿಸುವುದಿಲ್ಲ, ರಾತ್ರಿ ಹಗಲಾಗಲು ಪ್ರಯತ್ನಿಸುವುದಿಲ್ಲ ಪಕ್ಷಾಂತರ ಸಮಯ ಸಾಧಕತನ, ಘೋರ ಪಾತಕ.**

**(ನಾದಿರ್ ನೋವಿನಿಂದ 'ಮುಲ್ಕ್' ಎಂದು ಕಿರುಚುವನು ಅವನು ಕೇಳದ ಸುಳ್ಳು ಮತ್ತು ಹೇಡಿತನ ನಾದಿರ್‌ನ ನೋವು ಹೆಚ್ಚಿಸಿವೆ. ಇಡೀ ನಿಸರ್ಗ ರೊಚ್ಚಿಗೆದ್ದ ಅನುಭವ; ನಾದಿರ್ 'ಮುಲ್ಕ್ ನಿಲ್ಲಿಸು' ಎಂದು ಕೂಗಿ ಕತ್ತಿ ಹಿಡಿದು ಅವನನ್ನು ಕೊಲ್ಲುವನು ಮುಲ್ಕ್ ಚಿರಿಕೊಂಡು ಬೀಳುವನು. ಕ್ರಮೇಣ ಮೌನ, ನಾದಿರ್ ಏದುಸಿರು ಬಿಡುತ್ತಾ ದೊರೆ ನಜಿರುದ್ದೀನ್‌ನನ್ನು ನೋಡುವನು)"**[7] ದ್ರೋಹಿಗಳನ್ನು ಎಂದು ನಾದಿರ್‌ಷಾ ಸಹಿಸಲಾರ ತಾನು ಸಾವಿನಂಚಿನಲ್ಲಿದ್ದರು ಲೆಕ್ಕಿಸದೇ ಅನ್ಯಾಯ ಪಿತೂರಿ ಮಾಡುವವರನ್ನು ಆತ ಉಳಿಸಲಾರ.

ನಾದಿರ್‌ಷಾನ ಆರೋಗ್ಯ ಹದಗೆಟ್ಟು ರಾಜ್ಯದಲ್ಲಿರುವ ಒಳ್ಳೆಯ ಹಕೀಮರನ್ನು ಬರಲು ಹೇಳುತ್ತಾನೆ. ದಿಲ್ಲಿಯ ಒಳ್ಳೆಯ ಹಕೀಮ ಎಂದು ಹೆಸರು ಮಾಡಿದವನು ಹಕೀಮ ಅಲಾವಿಖಾನ್. ನಾದಿರ್‌ಷಾನಷ್ಟೆ ಹಕೀಮ ಅಲಾವಿಖಾನ್ ಒರಟ, ಯಾರನ್ನು ಲೆಕ್ಕಿಸದ ವ್ಯಕ್ತಿ, ರಾಜ, ಮಂತ್ರಿ, ಪ್ರಜೆ, ಯಾರೇ ಇರಲಿ ತನ್ನ ಹತ್ತಿರ ತಪಾಸಣೆ ಮಾಡಿಸಿಕೊಳ್ಳಲು ಬಂದಾಗ ಅವರನ್ನು ರೋಗಿ ಎಂದೆ ಅವನ ಕಲ್ಪನೆ. ನಾದಿರ್‌ಷಾನ ಅರಮನೆಗೆ ತಪಾಸಣೆ ಬಂದಾಗ ನಾದಿರ್‌ಷಾನ ಹೆಸರು ಕೇಳುತ್ತಾನೆ. ಇದರಿಂದ ಗರ್ಜಿಸಿದ ರಾಜ ನಾನು ಚಕ್ರವರ್ತಿ ನಾದಿರ್‌ಷಾ ನನ್ನ ಹೆಸರು ಕೇಳುತ್ತಿಯಾ ಮೂರ್ಖ ಎಂದು ತೆಗಳುತ್ತಾನೆ **"ಅಲಾವಿ: (ಚಕಿತನಾಗಿ) ನಾನು ನಿಮ್ಮ ಹೆಸರು ಕೇಳಿದ್ದಕ್ಕೆ ನಾನು ಏಕೆ ಮೂರ್ಖನಾಗಬೇಕು? ಮಹಾಶಯರೆ, ಜನ ನನ್ನನ್ನು ಗೌರವಿಸುತ್ತಿರುವುದನ್ನು ನೋಡಿದರೆ, ನಾನು ಮೂರ್ಖ ಇರಲಿಕ್ಕಿಲ್ಲ ನನಗೆ ಹೆಚ್ಚು ಮಾತಾಡಲು ಇಷ್ಟವಿಲ್ಲ. ನನ್ನ, ನಿಮ್ಮ ಈ ಕ್ಷಣದ ಸಂಬಂಧವನ್ನು ಸ್ಪಷ್ಟಪಡಿಸಿಕೊಳ್ಳೋಣ, ನೀವಿಗ ರೋಗಿ ನಾನು ವೈದ್ಯ ಅಲ್ಲವೇ"**[8] ಚಕ್ರವರ್ತಿಯಾದ ನಾದಿರ್‌ಷಾನನ್ನು ನೇರವಾಗಿ ಪ್ರಶ್ನೆ ಮಾಡುವ ನಿಷ್ಠುರವಾದಿ ಅಲಾವಿಖಾನ್ ಹೀಗೆ ಇಬ್ಬರಿಗೂ ವಾದ–ವಿವಾದವಾಗಿ ಅಲಾವಿಖಾನ್‌ನನ್ನು ಅರಮನೆಯಿಂದ ಓಡಿಸುತ್ತಾನೆ. ಬೇರೆ ಬೆರೆ ಹಕೀಮರು ಬಂದರು ರೋಗ ಗುಣವಾಗುವುದಿಲ್ಲ. ಕೊನೆಗೆ ಮತ್ತೆ ಅಲಾವಿಖಾನನ್ನು ಕರೆಯಿಸುತ್ತಾನೆ. ಈತನಿಂದ ರೋಗ ಗುಣವಾಗುತ್ತದೆ. ಕೆಲವು ಬದುಕಿನ ಸತ್ಯಗಳನ್ನು ನಾದಿರ್‌ಷಾನಿಗೆ ತಿಳಿಸಿಕೊಡುತ್ತಾನೆ. ಅಂಗರಕ್ಷಕನೊಬ್ಬ ಸತ್ತಿರುವುದರಿಂದ ದಿಲ್ಲಿಯನ್ನು ತುರಿದುಹಾಕುವಂತೆ ಆಜ್ಞೆ ಮಾಡುತ್ತಾನೆ. ಹೆಂಗಸು, ಮಕ್ಕಳು, ರೋಗಿಗಳು, ಮುಗ್ಧರು, ವೃತ್ತಿನಿರತರು ಎಲ್ಲರನ್ನು ಮನೆಯಿಂದ ಹೊರಗೆಳೆದು ಅವಮಾನಮಾಡಿ ಕೊಲ್ಲತೊಡಗಿದಿರಿ, ಕಗ್ಗೊಲೆ ಮಾಡಿದಿರಿ, ಎಷ್ಟು ಹೆಣ್ಣು ಮಕ್ಕಳನ್ನು ಅತ್ಯಾಚಾರ ಮಾಡಲಾಯಿತು. ಇವುಗಳ ಶಾಪದಿಂದ ನಿನಗೆ ಕಾಯಿಲೆ ಬಂದಿದೆ ಎಂದು ಹೇಳುತ್ತಾನೆ. ಬದುಕಿನ ದರ್ಶನ ಮಾಡಿಸುತ್ತಾನೆ.

ನಾಟಕದ ವಸ್ತು ಹಳೆಯದಾದರು ಒಂದು ಹೊಸ ಸಮಸ್ಯೆಗಳಾದ, ಅತ್ಯಾಚಾರ, ಕೀಳರಿಮೆ, ಪಿತೂರಿ, ದಬ್ಬಾಳಿಕೆ ಇಂತಹ ಒಂದಲ್ಲಾ ನೂರಾರು ಅಂಶಗಳನ್ನು ಬಯಲಿಗೆಳೆಯುತ್ತಾರೆ. ಹಳೆಯ ಕತೆಗೆ, ಒಂದು ಹೊಸ ಚೌಕಟ್ಟನ್ನು ಒದಗಿಸುವಲ್ಲಿ ಲಂಕೇಶರು ಸಫಲರಾಗಿದ್ದಾರೆ.

## ಅಡಿಟಿಪ್ಪಣಿಗಳು :

1. ಸದಾಶಿವ ಕೆ. : ಸಮಗ್ರ ಭಾರತದ ಇತಿಹಾಸ .ಪು–379.
2. ಸದಾಶಿವ ಕೆ. : ಸಮಗ್ರ ಭಾರತದ ಇತಿಹಾಸ . ಪು–379–380
3. ಲಂಕೇಶ ಪಿ. : ಗುಣಮುಖ . ಪು– 3.
4. ಲಂಕೇಶ ಪಿ. : ಗುಣಮುಖ . ಪು– 9–10.
5. ಲಂಕೇಶ ಪಿ. : ಗುಣಮುಖ . ಪು– 12.

6. ಲಂಕೇಶ ಪಿ. : ಗುಣಮುಖ . ಪು– 14–15.
7. ಲಂಕೇಶ ಪಿ. : ಗುಣಮುಖ . ಪು– 29–30.
8. ಲಂಕೇಶ ಪಿ. : ಗುಣಮುಖ . ಪು– 32.